ದಿನಾಂಕ 22 ನೇ ಸೆಪ್ಟೆಂಬರ್ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದ

ನನ್ನ ಪತಿ ಮನೆಪಂಡ ಎಂಬ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವರು. ನನ್ನ ಪತಿ ಜೀವಂತವಿದ್ದಾಗ ಬ್ಯಾಂಕ್ ವ್ಯವಹಾರ ಮಾಡುತ್ತಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ನನ್ನ ಪತಿಯ ಸಾಲಕ್ಕೆ ಗ್ಯಾರೆಂಟರ್ ಆಗಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಹೆಬ್ಬಾಲೆ ಗ್ರಾಮದವರು ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಆಸ್ತಿ ದೇವರಪುರದಲ್ಲಿ ಇದೆ ಎಂದರೆ ಸರಿಯಲ್ಲ, ಹೆಬ್ಬಾಲೆಯಲ್ಲಿ ಇದೆ ಎನ್ನುತ್ತಾರೆ. ನನ್ನ ಪತಿಗೆ ಹೆಬ್ಬಾಲೆಯಲ್ಲಿ ಚಿರ ಹಾಗೂ ಚರ ಆಸ್ತಿಗಳು ಇದ್ದವು ಎಂದರೆ ಸರಿ. ನನ್ನ ಪತಿಗೆ ಹೆಬ್ಬಾಲೆ ಗ್ರಾಮದಲ್ಲಿ ಏಳುವರೆ ಎಕರೆ ತೋಟ ಇದೆ. 3 ಎಕರೆ ಗದ್ದೆ ಇದೆ. ಹೆಬ್ಬಾಲೆಯಲ್ಲಿ ಫಲವತ್ತಾದ ಭೂಮಿ ಇದೆ ಎಂದರೆ ನನಗೆ ಗೊತ್ತಿಲ್ಲ. ಏಳುವರೆ ಎಕರೆ ಕಾಫಿ ತೋಟದಲ್ಲಿ ಒಳ್ಳೆ ಕಾಫಿ ಬೆಳೆ ಬರುತ್ತದೆ ಎಂದರೆ ನೀರಿನ ಸೌಲಭ್ಯ ಇಲ್ಲ ಎನ್ನುತ್ತಾರೆ. ಗದ್ದೆಯಲ್ಲಿ ಭತ್ತ ಬೆಳೆಯುತ್ತೇವೆ ಎಂದರೆ ನಾವು ಬೆಳೆಯುತ್ತಿಲ್ಲ ಎನ್ನುತ್ತಾರೆ.

ನನ್ನ ಪತಿಗೆ ಅಮೇಜ್, ಮಾರುತಿ ಕಾರು ಇತ್ತು. ನನ್ನ ಪತಿ ಮೃತರಾದ ಮೇಲೆ ನಾನು ಮತ್ತು ನನ್ನ ಮಕ್ಕಳು ಮಾತ್ರ ನನ್ನ ಪತಿಗೆ ವಾರಸುದಾರರು ಎಂದರೆ ಸರಿ. ನನ್ನ ಪತಿ ವ್ಯವಸಾಯ ಹೊರತುಪಡಿಸಿ ಬೇರೆ ವ್ಯವಹಾರ ಮಾಡುತ್ತಿರಲಿಲ್ಲ ಎನ್ನುತ್ತಾರೆ. ನನ್ನ ಪತಿ ಟಿಂಬರ್ ಹಾಗೂ ಕಾಫಿ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ನನ್ನ ಪತಿ ಅನ್ಯೋನ್ಯವಾಗಿದ್ದೆವು ಎನ್ನುತ್ತಾರೆ. ನನ್ನ ಪತಿಯ ಸಹಿಯನ್ನು ಗುರುತಿಸಲು ಆಗುವುದಿಲ್ಲ ಎನ್ನುತ್ತಾರೆ.

ನಿಪಿ 5 ರಲ್ಲಿರುವ ಫೋಟೊ ನನ್ನದು ಹಾಗೂ ನನ್ನ ಪತಿಯದ್ದು. ಸಾಕ್ಷಿ ತನ್ನ ಪತಿಯ ಸಹಿಯನ್ನು ನೋಡಿ ಗುರುತಿಸಲಾಗುವುದಿಲ್ಲ ಎಂದು ನುಡಿದಿರುತ್ತಾರೆ. ದಿ.29.01.2016 ಹಾಗೂ ದಿ.12.01.2018 ರಂದು 4 ನೇ ಪ್ರತಿವಾದಿ ಹಾಗೂ ನನ್ನ ಗಂಡನಿಗೆ ವಾದಿಯವರು ನೋಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಪತಿಗೆ ಟಿಂಬರ್ ಅಂಗಡಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಪತಿ ಮೃತರಾದ ನಂತರ ಅಂಗಡಿಯಲ್ಲಿದ್ದ ಟಿಂಬರ್ ಅನ್ನು ನಾನು ಮಾರಾಟ ಮಾಡಿ ಹಣ ಪಡೆದಿದ್ದೇನೆ ಎಂದರೆ ಸರಿಯಲ್ಲ, ನಮಗೆ ಯಾವುದೇ ಅಂಗಡಿ ಇರಲಿಲ್ಲ ಎನ್ನುತ್ತಾರೆ. ನಾವು ನನ್ನ ಪತಿಯ ಆಸ್ತಿಯನ್ನು ಅನುಭವಿಸುತ್ತಿರುವ ಕಾರಣ ನಾನು ಸಾಲ ತೀರಿಸಲು ಬಾಧ್ಯಳು ಹಾಗೂ 4 ನೇ ಪ್ರತಿವಾದಿ ಬಾಧ್ಯ ಎಂದರೆ ಯಾವುದೇ ಆಸ್ತಿ ನನ್ನ ಹೆಸರಿನಲ್ಲಿ ಇಲ್ಲ, ನ್ಯಾಯಾಲಯದಲ್ಲಿ ಇದೆ ಎನ್ನುತ್ತಾರೆ. ನಾನು ಹಣ ಪಾವತಿಸುವುದರಿಂದ ತಪ್ಪಿ ಸಿಕೊಳ್ಳಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ನಾದಿನಿ ಫಸಲನ್ನು ಕುಯಿದ್ದಿರುವ ಬಗ್ಗೆ ನಾನು ದೂರು ಸಲ್ಲಿಸಿದ್ದೇನೆ ಎನ್ನುತ್ತಾರೆ.

ಸದರಿ ದೂರನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿ ಪಿ 4 ರಂತೆ ನನ್ನ ಪತಿ ಪರವಾನಿಗೆ ಪಡೆದು ಟಿಂಬರ್ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.